ನನ್ನಿಡೀ ಬದುಕಿನಲ್ಲಿ ನಾನು ಸಾಕಷ್ಟು ಖಿನ್ನತೆಯಿಂದ ಬಳಲಿದ್ದೇನೆ ಮತ್ತು ಹಲವು ಹತ್ತು ಸಲ ಆತ್ಮಹತ್ಯೆಗೂ ಪ್ರಯತ್ನಿಸಿದ್ದೇನೆ. ನನ್ನ ಬದುಕಿಗೂ ಅರ್ಥವಿದೆ; ಪ್ರೀತಿ, ಬೆಂಬಲ ಮತ್ತು ಬೇಷರತ್ ಸ್ನೇಹವನ್ನು ಎಲ್ಲರಿಂದ ಪಡೆಯುವ ಹಕ್ಕು ನನಗೂ ಕೂಡ ಇದೆ ಎಂದು ನನಗರ್ಥವಾಗಿದ್ದು ದೇವರು ಎಂಬ ಸಾಂತ್ವನವನ್ನು ನಾನು ಕಂಡುಕೊಂಡಾಗ. ಲ್ಯಾಟಿನ್ ಅಮೆರಿಕದಲ್ಲಿ ಕ್ರಿಶ್ಚಿಯಾನಿಟಿ ಮತ್ತು ವಸಹಾತುಶಾಹಿ 600 ವರ್ಷಕ್ಕೂ ಹಿಂದಿನಿಂದ ನಮ್ಮ ಸಂಸ್ಕೃತಿಯಲ್ಲಿ ಹುದುಗಿರುವ ಅತ್ಯಂತ ಸಂಕೀರ್ಣವಾದ ವಿಷಯಗಳಾಗಿವೆ. ಕ್ರಿಶ್ಚಿಯನ್ ಮತವನ್ನು ಸ್ಥಳೀಯ ಜನರ ಮೇಲೆ ಮತ್ತು ಆಫ್ರಿಕಾದಿಂದ ತಂದ ಗುಲಾಮರ ಮೇಲೆ ಹೇರಲಾಯಿತು. ಧರ್ಮದ ಈ ಹೇರಿಕೆ ಕೆಲವು ಸಂದರ್ಭಗಳಲ್ಲಿ ಶಾಂತಿಯುತವಾಗಿ ನಡೆದರೆ ಹಲವು ಸಂದರ್ಭಗಳಲ್ಲಿ ಹಿಂಸಾತ್ಮಕವಾಗಿ ನಡೆಯಿತು.

◆ **‘ಮಾರ್ಕ್ವೆಜ್’ ಕನ್ನಡದ ಲೇಖಕನೇನೋ ಅನ್ನುವ ಹಾಗೆ ಅವನ ಹೆಸರು ಇಲ್ಲಿನ ಸಾಹಿತ್ಯದ ಚರ್ಚೆಗಳಲ್ಲಿ ಮತ್ತೆ ಮತ್ತೆ ಪ್ರಸ್ತಾಪ ಆಗ್ತಾ ಇರುತ್ತೆ. ಕನ್ನಡದಲ್ಲೂ ಮಾರ್ಕ್ವೆಜ್ ಭಕ್ತರಿದ್ದಾರೆ. ಆತ ಬರೆದ ‘ಒನ್ ಹಂಡ್ರೆಡ್ ಇಯರ್ಸ್ ಅಫ್ ಸಾಲಿಟ್ಯೂಡ್’ ಕಾದಂಬರಿಯನ್ನು ಜನ ಅಷ್ಟಾಗಿ ಮೆಚ್ಚಿಕೊಳ್ಳಲು ಕಾರಣವೇನು? ಲ್ಯಾಟಿನ್ ಅಮೆರಿಕದ ಜನಸಾಮಾನ್ಯರ ಕಂಟೆಪರರಿ ರಿಯಾಲಿಟಿಯೊಂದಿಗೆ ಅದು ಹೇಗೆ ಸಂವಹನಗೊಂಡಿದೆ ಅನ್ನುತ್ತೆ?**

ನಾನು ಆಳವಾಗಿ ಮೆಚ್ಚುವ ಲೇಖಕ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಜ್. ‘ಒನ್ ಹಂಡ್ರೆಡ್ ಇಯರ್ಸ್ ಆಫ್ ಸಾಲಿಟ್ಯೂಡ್’ ಲ್ಯಾಟಿನ್ ಅಮೆರಿಕ ಅದರಲ್ಲೂ ಕೊಲಂಬಿಯಾದ Contemporary Realityಗೆ ಸರಿಯಾಗಿ ಹೊಂದಿಕೆಯಾಗುತ್ತದೆ. ಯಾಕೆಂದರೆ ಇವತ್ತಿಗೂ ಇಲ್ಲಿ ಕುಟುಂಬಗಳು ಪಾರಂಪರಿಕ ರಾಜಕೀಯ ಹಿಂಸೆ, ಸಶಸ್ತ್ರ ಬಂಡಾಯ ಅಥವಾ ಅವಕಾಶಗಳ ಕೊರತೆಯಿಂದ ಹುಟ್ಟಿದೂರನ್ನು ಬಿಟ್ಟು ಸಾಮೂಹಿಕವಾಗಿ ಗುಳೆ ಹೋಗುತ್ತಿವೆ. ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಯುದ್ಧ ಮತ್ತು ಸರ್ವಾಧಿಕಾರ ಸಾಮಾನ್ಯ ಸಂಗತಿಯಾಗಿದ್ದು ಇದನ್ನೂ Routine ಅಂತ ಪರಿಗಣಿಸುತ್ತಿರುವುದೇ ದುರಂತವಾಗಿದೆ. ಮಾರ್ಕ್ವೆಜ್ ತನ್ನ ಹೆಚ್ಚಿನ ಕಾದಂಬರಿಗಳಲ್ಲಿ ಇಂತಹ ಸನ್ನಿವೇಶಗಳನ್ನು ಬಯಲಿಗೆಳೆದಿದ್ದಾನೆ. ಈ ಮಹಾನ್ ಪುಸ್ತಕ ಪ್ರಕಟ ಗೊಂಡು ಹಲವು ವರ್ಷಗಳೇ ಕಳೆದಿದ್ದರೂ, ಕೊಲಂಬಿಯಾ ಈಗಲೂ ಯುದ್ಧಾತಂಕಗಳನ್ನು ಎದುರಿಸುತ್ತಿದೆ. ವೈಚಾರಿಕ ಗೆರಿಲ್ಲಾ ಯುದ್ಧ ಇಲ್ಲಿ ಈಗಲೂ ನಡಿಯುತ್ತಲೇ ಇದೆ.

◆ **ನಿಮ್ಮ ಬಾಲ್ಯದ ಸಿಹಿ ಮತ್ತು ಕಹಿ ನೆನಪು ಯಾವುದು?**

ಆಗಷ್ಟೇ ಹುಟ್ಟಿದ ನನ್ನ ತಮ್ಮನ ಎಳೆ ಗುಲಾಬಿ ಕೈಗಳನ್ನು ಮೊದಲ ಸಲ ಮುಟ್ಟಿ ನೋಡಿದ ಕ್ಷಣ ನನ್ನ ಬಾಲ್ಯದ ಅತೀ ಮಧುರ ನೆನಪು. ನನ್ನ ಕಣ್ಣ ಮುಂದೆ ಕೈ ಕಾಲಾಡಿಸುವ ಹೊಸ ಜೀವವನ್ನು ಕಂಡು ಖುಷಿ ಮತ್ತು ಅಚ್ಚರಿಯಾಗಿತ್ತು. ನನ್ನ ಬದುಕಿನಲ್ಲಿ ಬಂದು ಈಗ ನನ್ನ ಜೊತೆಗಿಲ್ಲದ ಎಲ್ಲಾ ಸಾಕುಪ್ರಾಣಿಗಳನ್ನು ಪ್ರೀತಿ ಮತ್ತು ಅಂತಃಕರಣದಿಂದ ನೆನೆಯುತ್ತೇನೆ. ವಿಶೇಷವಾಗಿ ನಾಯಿ, ಬೆಕ್ಕು ಮತ್ತು ಕುದುರೆಗಳು. ಅವುಗಳನ್ನು ನಾನು ಬಹಳ ಹಚ್ಚಿಕೊಂಡಿದ್ದೆ, ಮತ್ತವು ನನಗೆ ಸಂತಸದ ಘಳಿಗೆಗಳನ್ನು ಕಂಡುಕೊಳ್ಳಲು ಸಹಾಯ ಮಾಡಿವೆ.

ಚಿಕ್ಕವಳಿದ್ದಾಗ ಸ್ವಂತ ಅಜ್ಜ ಅಂದರೆ ಅಮ್ಮನ ತಂದೆಯಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದದ್ದು. ಅದನ್ನು ನೆನಸಿಕೊಂಡಾಗ ನನ್ನೊಳಗೆ ನಾನು ಚೂರು ಚೂರಾಗುತ್ತೇನೆ. ಇದು ನನ್ನ ಬದುಕಿನುದ್ದಕ್ಕೂ ಹಲವು ತರದ ಟ್ರಾಮಾಗಳನ್ನ ಮತ್ತು ಮಾನಸಿಕ ಆರೋಗ್ಯದ ಸಮಸ್ಯೆಗಳನ್ನು ಸೃಷ್ಟಿಸಿತು. ಕಣ್ಣಿಗೆ ಕಾಣದ ಈ ಗಾಯಗಳ ಜೊತೆಗೆ ನಾನಿವತ್ತಿಗೂ ಒದ್ದಾಡುತ್ತಿದ್ದೇನೆ. ಸರಳ ಅಧ್ಯಾತ್ಮ ಮತ್ತು ಮನೋವೈಜ್ಞಾನಿಕ ಥೆರಪಿಗಳ ಸಹಾಯದಿಂದ ಅದರಿಂದ ಗುಣಮುಖಳಾಗಲು ನಾನಿನ್ನೂ ಹೆಣಗುತ್ತಿದ್ದೇನೆ. ಬಹಳ ವರ್ಷಗಳ ತನಕ ನಾನಿದನ್ನು ಸಂಪೂರ್ಣ ಮೌನವಾಗಿ ಅನುಭವಿಸಿದ್ದೆ. ಆದರಿವತ್ತು ಇದರ ಬಗ್ಗೆ ಮಾತನಾಡಲು ನನಗೆ ನಾಚಿಕೆಯಾಗಲಿ, ಮುಜುಗರವಾಗಲಿ ಆಗುತ್ತಿಲ್ಲ. ಯಾಕೆಂದರೆ ಮಾತನಾಡುವುದರ ಮೂಲಕ ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು ಅರಿವು ಮೂಡಿಸಲು ಪ್ರಯತ್ನಿಸುತ್ತೇನೆ. ನನಗೆ ಗೊತ್ತಿರುವ ಹಾಗೆ ಹೆಣ್ಣುಮಕ್ಕಳ ಮೇಲೆ ನಡೆಯುವ ಬಹುತೇಕ ದೌರ್ಜನ್ಯಗಳಿಗೆ ಕಾರಣಕರ್ತರು ನಮ್ಮ ಮನೆಯ ಕುಟುಂಬಸ್ಥರು ಅಥವಾ ಪರಿಚಿತರೇ ಆಗಿರುತ್ತಾರೆ. ●